# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್, ಸಿ ನ್ಯಾಯಾಲಯ, ನವಲಗುಂದ.

## ಸಿ.ಸಿ ನಂ. 79/2024

**ಪಿರ್ಯಾದಿದಾರರುಃ ಅಣ್ಣಿಗೇರಿ ಪಿ. ಎಸ್.**

**ವಿರುದ್ದ**

**ಆರೋಪಿತಃ 1. ಮಾರುತಿ ವೀರೂಪಾಕ್ಷಪ್ಪ ತಳವಾರ.**

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತನ ಹೇಳಿಕೆ

**ಪ್ರಶ್ನೆ 1 : ನ್ಯಾಯಾಲಯದಲ್ಲಿ ಆದ ಸಾಕ್ಷಿದಾರರ ಸಾಕ್ಷ್ಯ ಕೇಳಿದ್ದೀರಾ?**
**ಉತ್ತರಃ ಕೇಳಿದ್ದೇನೆ.**

**ಪ್ರಶ್ನೆ 2 : ಪ್ರಾ.ಸಾ-1/ಚಾ.ಸಾ-1 ಸುನೀಲ ಬಸಪ್ಪ ಕುಂಬಾರ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಈಗ ಅಂದಾಜು 1 ವರ್ಷದ ಹಿಂದೆ ಆರೋಪಿ ನನ್ನ ತಂದೆಯನ್ನು ಮೋಟಾರ ಸೈಕಲ್ ಮೇಲೆ ಕರೆದುಕೊಂಡು ಹೋಗಿ ಅಣ್ಣಿಗೇರಿಯ ಟೋಲ್ ನಾಕಾದ ಹತ್ತಿರ ಸ.05.30 ಗಂಟೆಗೆ ಅಪಘಾತಪಡಿಸಿರುತ್ತಾರೆ. ಚಾಲಕ ಅತೀ ವೇಗದಿಂದ ಚಲಾಯಿಸಿ ನರಗುಂದದಿಂದ ಬಂದು ನಮಗೆ ಅಪಘಾತ ಪಡಿಸಿರುತ್ತಾರೆ. ಸದರಿ ಅಪಘಾತ ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಂತರ ಸದರಿ ವಿಷಯ ನನಗೆ ಗೊತ್ತಾಗಿದ್ದು, ಆಗ ನಾನು ಅಪಘಾತ ಸ್ಥಳಕ್ಕೆ ಹೋಗಿದ್ದು, ನನ್ನ ತಂದೆ ಸದರಿ ಅಪಘಾತದಿಂದ ಗಾಯಗೊಂಡು ಮೃತಪಟ್ಟಿರುತ್ತಾರೆ. ನಂತರ ನಾನು ಪೋಲಿಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?
**ಉತ್ತರಃ ಸುಳ್ಳು.**

**ಪ್ರಶ್ನೆ 3 : ಪ್ರಾ.ಸಾ-2/ಚಾ.ಸಾ-4 ಶೇಖರಯ್ಯ ಸಿದ್ಧಲಿಂಗಯ್ಯ ಹಿರೇಮಠ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 04-09-2023 ರಂದು ಬೆ.10-15 ರಿಂದ 11-15 ಗಂಟೆಯವರೆಗೆ ನಲವಡಿಯ ಹತ್ತಿರ ಸಂಭವಿಸಿದ ಅಪಘಾತಕ್ಕೆ ಸಂಬಂಧಿಸಿ ನಿಪಿ-1 ರಂತೆ ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಸದರಿ ಸಹಿಯನ್ನು ನಲವಡಿಯ ಹತ್ತಿರ ಸಂಭವಿಸಿದ

ಅಪಘಾತಕ್ಕೆ ಸಂಬಂಧಿಸಿ ಮಾಡಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 4 : ಪ್ರಾ.ಸಾ-8/ಚಾ.ಸಾ-18 ಸಿದ್ಧಾರೂಢ ಗುರುನಾಥ ಆಲದಕಟ್ಟಿ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 03-09-2023 ರಂದು ನಾನು ಠಾಣೆಯಲ್ಲಿದ್ದಾಗ ರಾ.08.15 ಗಂಟೆಗೆ ಚಾಸಾ-1 ರವರು ಸಲ್ಲಿಸಿದ ಗಣಕೀಕೃತ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ಸಂಃ 105/2023 ನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ದಿನಾಂಕಃ 04-09-2023 ರಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಅಣ್ಣಿಗೇರಿಗೆ ತೆರಳಿ ಮೃತ ಬಸಪ್ಪ ವೀರಪ್ಪ ಕುಂಬಾರ ರವರ ಶವ ಪಂಚನಾಮೆಯನ್ನು ಚಾಸಾ-1 ರವರು ಗುರುತಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಬೆ.08.00 ರಿಂದ 09.00 ಗಂಟೆಯವರೆಗೆ ಶವ ಪಂಚನಾಮೆಯನ್ನು ಪೂರೈಸಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ-19 ರವರಿಗೆ ವಹಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 5 : ಪ್ರಾ.ಸಾ-9/ಚಾ.ಸಾ-20 ರವಿಕುಮಾರ ಶಿವಲಿಂಗಪ್ಪ ಕಪ್ಪತ್ತನ್ನವರ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿನಾಂಕಃ 20-09-2023 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-19 ರವರಿಂದ ಕಡತವನ್ನು ಪಡೆದುಕೊಂಡು, ದಿನಾಂಕಃ 26-09-2023 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಆತನನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿಯವನಿಂದ ಮೋಟಾರ ಸೈಕಲ್ ಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡು, ಸದರಿ ದಿನ ಮೋಟಾರ ಸೈಕಲ್ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 06-10-2023 ರಂದು ವಿಧಿ ವಿಜ್ಞಾನ ಪ್ರಯೋಗಾಲಯ ಬೆಳಗಾವಿ ರವರಿಂದ ರಕ್ತದ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 6 : ಪ್ರಾ.ಸಾ-10/ಚಾ.ಸಾ-19 ಪ್ರಮೋದ ಎಲಿಗಾರ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿನಾಂಕಃ 04-09-2023 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-18 ರವರಿಂದ ಕಡತವನ್ನು ಪಡೆದುಕೊಂಡು ನಂತರ ಅದೇ ದಿನ ಗುನ್ನಾ ಸ್ಥಳಕ್ಕೆ ತೆರಳಿ ಚಾಸಾ-1 ರವರು ತೋರಿಸಿದ ಮೇರೆಗೆ ಅಪಘಾತದ ಸ್ಥಳದ ಪಂಚನಾಮೆಯನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಬೆ.10.15 ರಿಂದ 11.15 ಗಂಟೆಯವರೆಗೆ ಪೂರೈಸಿ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ, ಭಾವಚಿತ್ರ ತೆಗೆದಿರುತ್ತೇನೆ. ನಂತರ ಸದರಿ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸೊಕೋ ಅಧಿಕಾರಗಳ ಸಮಕ್ಷಮ ಸ್ಥಳದಲ್ಲಿದ್ದ blood soaked found on road and control soil sample ಗಳನ್ನು ಜಪ್ತಿ ಪಡಿಸಿಕೊಂಡು ಬೆ.11.30 ರಿಂದ ಮ.12.15 ಗಂಟೆಯವರೆಗೆ ಪಂಚನಾಮೆ ಪೂರೈಸಿರುತ್ತೇನೆ. ಅದೇ ದಿನ ನ್ಯಾಯಾಲಯಕ್ಕೆ ಸ್ವತ್ತಿನ ವಿವರ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಅಣ್ಣಿಗೇರಿ ಪೋಲೀಸ ಠಾಣಾ ಆವರಣದಲ್ಲಿ ಅಪಘಾತಪಡಿಸಿದ ಮತ್ತು ಅಪಘಾತಕ್ಕೋಳಾದ ವಾಹನಗಳನ್ನು ಚಾಸಾ-9 ರವರು ತೋರಿಸಿದ ಮೇರೆಗೆ ಚಾಸಾ-4 ಮತ್ತು 6 ರವರ ಸಮಕ್ಷಮ ವಾಹನ ಜಪ್ತಿ ಪಂಚನಾಮೆಯನ್ನು ಮ.03.00 ರಿಂದ 04.00 ವೆರೆಗೆ ಪೂರೈಸಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ನಂತರ ಅದೇ ದಿನ ಚಾಸಾ-9 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ನಮ್ಮ ಸಿಬ್ಬಂದಿಯಾದ ಲಕ್ಷ್ಮೀಕಾಂತ ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 05-09-2023 ರಂದು ಸದರಿ ವಾಹನಗಳ ಯಾಂತ್ರಿಕ ಪರೀಕ್ಷೆಗಾಗಿ ಚಾಸಾ-15 ರವರಿಗೆ ಕಳುಹಿಸಿರುತ್ತೇನೆ. ದಿನಾಂಕಃ 05-09-2023 ರಂದು ಇಂಡಿಮ್ ನಿಟಿ ಬಾಂಡ್ ಪಡೆದು ಲಾರಿಯನ್ನು ಅದರ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 11-09-2023 ರಂದು ಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 12-09-2023 ರಂದು ಮೃತನ ಪಿ ಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 13-09-2023 ರಂದು ನಮ್ಮ ಸಿಬ್ಬಂದಿ ಪಿ ಸಿ 784 ರವರು ಆರೋಪಿಯ ಹಾಗೂ ಲಾರಿ ಚಾಲಕನ ರಕ್ತದ ಮಾದರಿಯನ್ನು ಹಾಜರು ಪಡಿಸಿರುತ್ತಾರೆ. ಸದರಿ ರಕ್ತದ ಮಾದರಿಯನ್ನು ಚಾಸಾ-7 ಮತ್ತು 8 ರವರ ಸಮಕ್ಷಮ ಬೆ.11.15 ರಿಂದ 11.45 ಗಂಟೆಯವರೆಗೆ ಜಪ್ತಿ ಪಡಿಸಿಕೊಂಡು ಪಂಚನಾಮೆ ಪೂರೈಸಿ ನ್ಯಾಯಾಲಯಕ್ಕೆ ಸ್ವತ್ತಿನ ವಿವರ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ ದಿನ ಆರೋಪಿಗೆ ಹಾಜರಾಗುವಂತೆ ತಿಳಿಸಿ ನೋಟಿಸ ನೀಡಿರುತ್ತೇನೆ. ದಿನಾಂಕಃ 15-09-2023 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಆತನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 20-09-2023 ರಂದು ಜಪ್ತಿ ಪಡಿಸಿಕೊಂಡ ಮಾದರಿಗಳನ್ನು ಚಾಸಾ-17 ರವರಿಗೆ ಕಳುಹಿಸಿರುತ್ತೇನೆ. ಅದೇ ದಿನ ಮುಂದಿನ ತನಿಖೆಯನ್ನು

ಚಾಸಾ-20 ರವರಿಗೆ ವಹಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 7 : ನಿಮಗೆ ಮತ್ತೇನಾದರೂ ಹೇಳುವುದು ಇದೆಯಾ?**

**ಉತ್ತರಃ ಇಲ್ಲ.**

**ಪ್ರಶ್ನೆ 8 : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ?**

**ಉತ್ತರಃ ಇಲ್ಲ.**

**(ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಯತಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು)**

ಸಹಿ/-

**ದಿನಾಂಕಃ15-05-2026** **ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ಸ್ಥಳಃನವಲಗುಂದ.** **ನವಲಗುಂದ.**